# ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ.

ಪಿ.ಸಿ.ಆರ್. ನಂ.**80/2026**
ಪಿ.ಡಬ್ಲ್ಯೂ-**1**

ದಿನಾಂಕಃ 01-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಫಿರ್ಯಾದಿ ಪರ ಶ್ರೀ.ವೈ.ಡಿ.ಜೆ. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರ ಸಲ್ಲಿಸಿರುತ್ತೇನೆ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಹಾಜರು ಮಾಡಿದ್ದೇನೆ.

ಈಗ ನೋಡುತ್ತಿರುವ ದಾಖಲೆಯು ಆರೋಪಿಯು ನನಗೆ ನೀಡಿದ ಚೆಕ ಆಗಿರುತ್ತವೆ. ಅದನ್ನು ಈಗ ನಿಪಿ-1 ಎಂದು ಅದರಲ್ಲಿ ಆರೋಪಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಹಿಂಬರಹ ಆಗಿರುತ್ತದೆ. ಅದನ್ನು ಈಗ ನಿಪಿ-2 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಲಿಗಲ್ ನೋಟಿಸ್ ಈಗ ನಿ.ಪಿ.3 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಆರೋಪಿಯು ತಿರಸ್ಕರಿಸಿದ ನೋಟಿಸಿನ ಲಕೋಟೆಯನ್ನು ತೆರೆದ ನ್ಯಾಯ್ಯಾಲಯದಲ್ಲಿ ಒಡೆದು ನೋಡಲಾಗಿ ನೋಟಿಸಿನ ಪ್ರತಿಯನ್ನು ನಿ.ಪಿ -4 ಲಕೋಟೆಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಗಳನ್ನು ಪೊಸ್ಟಲ ಕಂಷಾಯಿನ್ ಮೆಂಟ ರಿಪೋರ್ಟ ಮತ್ತು ಅಂಚೆ ರಶೀದಿ ಅವುಗಳನ್ನು ಕ್ರಮವಾಗಿ ಈಗ ನಿಪಿ.5 ಮತ್ತು 6 ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಪ್ರಾರ್ಥಿಸಿಕೊಳ್ಳುತ್ತೇನೆ

**(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.